ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಗುರುವಾರ ದಿನಾಂಕ ೫ನೇ ಮಾರ್ಚಿ ೧೯೮೭, ಫಾಲ್ಗುಣ ೧೪, ೧೯೦೮ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ ೧೧–೦೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಅವರು ಪೀಠವನ್ನಲಂಕರಿಸಿದ್ದರು.]

ಸಂತಾಪ ಸೂಚನೆ

ಸಭಾಧ್ಯಕ್ಷರು.

ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದ, ಶ್ರೀ ಬಿ. ಎಂ. ಪುಟ್ಟಣ್ಣಗೌಡರವರು ದಿನಾಂಕ ೨೩–೨–೧೯೮೭ರಂದು ನಿಧನರಾದರೆಂದು ಈ ಸಭೆಗೆ ತಿಳಿಸಲು ವಿಷಾದಿಸುತ್ತೇನೆ. ಶ್ರೀಯುತರು ೧೯೪೫ ರಿಂದ ೧೯೪೯ರವರೆಗೆ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ.

ನಿಧನ ಹೊಂದಿದ ಸದಸ್ಯರ ಗೌರವದ ಅಂಗವಾಗಿ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಸದನವು ಒಂದು ನಿಮಿಷ ಮೌನವನ್ನು ಆಚರಿಸಿತು)

ಸದನದಲ್ಲಿ ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ಅಗಲಿದ ಸದಸ್ಯರ ಕುಟುಂಬದವರಿಗೆ ಕಳುಹಿಸಿಕೊಡಲಾಗುವುದು.

ಅಧ್ಯಕ್ಷರು.—ಈಗ ಪ್ರಶ್ನೋತ್ತರಗಳು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ನೀಡಲಾದ ಬಾಯಿಮಾತಿನ ಉತ್ತರಗಳು
ತೆರೆಯಲಾದ ಕರ್ನಾಟಕ ವಿದ್ಯುತ್ ಮಂಡಳಿಯ ಲೆಕ್ಕಪತ್ರ ಶಾಖೆ

೭೫೯. ಶ್ರೀ ಪಿ. ಬಿ. ಓಂಕಾರಮೂರ್ತಿ (ಕಡೂರು) ಮಾನ್ಯ ಕೈಗಾರಿಕಾ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮಾಂತರ ಪ್ರದೇಶದಲ್ಲಿ ಬಹುತೇಕ ಕಡೆ ರೈತರ ಅನುಕೂಲಕ್ಕಾಗಿ ವಿದ್ಯುಚ್ಛಕ್ತಿ ನಾನ್ ಅಕೌಂಟಿಂಗ್ ಸೆಕ್ಷನ್ ಮಾಡಿದ್ದು, ಅವುಗಳಲ್ಲಿ ಬಹುತೇಕ ಕಡೆ ಅಕೌಂಟೆಂಟ್ ಸೆಕ್ಷನ್ ತೆರೆಯದೆ ಜನಗಳಿಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ನಾನ್ ಅಕೌಂಟಿಂಗ್ ಸೆಕ್ಷನ್ ಇರುವ ಕಡೆ ಸಾಮಾಹಿಕವಾಗಿ ಎಲ್ಲವನ್ನು ಅಕೌಂಟಿಂಗ್ ಸೆಕ್ಷನ್ ಆಫೀಸಂಗಳಾಗಿ ಪರಿವರ್ತನೆ ಮಾಡಲಾಗುವುದೆ ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

ಅ) ಮತ್ತು ಆ) ಅಕೌಂಟಿಂಗ್ ಸೆಕ್ಷನ್‌ಗಳನ್ನು ಮಾಡುವುದಕ್ಕೆ ಕನಿಷ್ಟ ಪಕ್ಷ ೩,೦೦೦ ಗ್ರಾಹಕರ ಅಕೌಂಟ್‌ಗಳು ಮತ್ತು ಬ್ಯಾಂಕ್ ಸೌಲಭ್ಯಗಳು ಇರಬೇಕಾಗಿರುವುದರಿಂದ, ಎಲ್ಲಾ ನಾನ್ ಅಕೌಂಟಿಂಗ್